ಇ) ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದ ಕೂಡಲೇ ಇಲ್ಲಿ ಯೂತ್ ಹಾಸ್ಟೇಲ್ ಕಟ್ಟಲು ಕ್ರಮ ಕೈಗೊಳ್ಳುವರೆ;

ಈ) ಈ ಕೆಲಸಕ್ಕೆ ಅಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಲಾಗಿದೆಯೇ;

ಉ) ನೀಡಿದ್ದಲ್ಲಿ, ಎಷ್ಟು ಮೊತ್ತಕ್ಕೆ ನೀಡಲಾಗಿರುವುದು?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಹೌದು.

ಆ) ನೀಲಿ, ನಕಾಶಾ ಮತ್ತು ಅಡಳಿತಾತ್ಮಕ ಟಿಪ್ಪಣಿಯು ಕೇಂದ್ರ ಸರ್ಕಾರದಿಂದ ಬಂದ ಮೇಲೆ ಯುವನಿಲಯ ಕಟ್ಟಡದ ಕಾರ್ಯವನ್ನು ಕೇಂದ್ರ ಸರ್ಕಾರದ ಲೋಕೋಪಯೋಗಿ ಇಲಾಖೆ ತೆಗೆದುಕೊಳ್ಳಲಾಗುವುದು.

ಇ) ಹೌದು.

ಈ) ಇಲ್ಲ.

ಉ) ಅಂದಾಜು ಮೊತ್ತ ರೂ. 47.74 ಲಕ್ಷಗಳು.

ಗ್ರಾಮಾಂತರ ಪ್ರದೇಶಗಳಲ್ಲಿ ಪಡಿತರ ವಸ್ತುಗಳನ್ನು ಕುಟುಂಬದಲ್ಲಿರುವ ಜನಸಂಖ್ಯೆ ಆಧಾರದ ಮೇಲೆ ವಿತರಣೆ

530 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣದಲ್ಲಿ ಪಡಿತರ ಚೀಟಿಗಳನ್ನು ಹೊಂದಿರುವವರಿಗೆ ಕುಟುಂಬದಲ್ಲಿರುವ ಜನಸಂಖ್ಯೆ ಆಧಾರದ ಮೇಲೆ ಪಡಿತರ ವಸ್ತುಗಳನ್ನು ನೀಡುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಪದ್ಧತಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪಡಿತರ ಚೀಟಿ ಹೊಂದಿರುವವರಿಗೆ ಅನ್ವಯಿಸದೇ ಇರಲು ಕಾರಣಗಳೇನು?

ಶ್ರೀಮತಿ ಮನೋರಮ ಮದ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಹೌದು. (ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ ಮಾತ್ರ).

ಆ) ಗ್ರಾಮಾಂತರ ಪ್ರದೇಶದಲ್ಲಿ ಈ ಪದ್ಧತಿಯನ್ನು ಅನುಸರಿಸುತ್ತಿಲ್ಲ. ಏಕೆಂದರೆ ಗ್ರಾಮಾಂತರ ಪ್ರದೇಶದ ಜನರು ಸಾಮಾನ್ಯವಾಗಿ ಬೆಳೆಗಾರರಾಗಿದ್ದು ಅವರ ಅವಶ್ಯಕ ಆಹಾರಧಾನ್ಯಗಳನ್ನು ಅವರೇ ಬೆಳೆಯುತ್ತಾರೆ. ಅಡುಗೆಗಾಗಿ ಉರುವಲು ಉಪಯೋಗಿಸುತ್ತಾರೆ. ಸೀಮೆಎಣ್ಣೆಯನ್ನು ಕೇವಲ ದೀಪ ಉರಿಸಲು ಮಾತ್ರ ಉಪಯೋಗಿಸುತ್ತಾರೆ. ಆದರೆ ಪಟ್ಟಣ ನಿವಾಸಿಗಳು ಅವರ ಅವಶ್ಯಕತೆಗಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೇ ಆಧರಿಸುತ್ತಾರೆ. ಇದಲ್ಲದೆ ಕೇಂದ್ರ ಸರ್ಕಾರವು ನಮ್ಮ ಅವಶ್ಯಕತೆಗನುಸಾರ ಆಹಾರ ಧಾನ್ಯ: ಅಗತ್ಯ ವಸ್ತುಗಳನ್ನು ಹಂಚಿಕೆ ಮಾಡುತ್ತಿಲ್ಲವಾದುದರಿಂದ ಈ ಪ್ರದೇಶದ ಪಡಿತರ ಚೀಟಿಗಳಿಗೆ ಕೊಡುತ್ತಿದ್ದ ಪ್ರಮಾಣ ಸರಿಸಮವಾಗಿ ಹಂಚುವ ದೃಷ್ಟಿಯಿಂದ ಎಲ್ಲರಿಗೂ ಒಂದೇ ರೀತಿಯಲ್ಲಿ ಪಡಿತರ ಚೀಟಿಗಳ ಆಧಾರದ ಮೇಲೆ ಕೊಡಲಾಗುತ್ತಿದೆ.

ಹತ್ತನೆಯ ಹಣಕಾಸು ಆಯೋಗಕ್ಕೆ ರಾಜ್ಯ ಸರ್ಕಾರವು ಸಲ್ಲಿಸಿರುವ ವರದಿ

529 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹತ್ತನೇ ಹಣಕಾಸು ಆಯೋಗವು ರಾಜ್ಯಕ್ಕೆ ಯಾವಾಗ ಭೇಟಿ ನೀಡಿತ್ತು?

ಆ) ಆ ಆಯೋಗವು ರಾಜ್ಯದಲ್ಲಿ ಯಾವ ಯಾವ ಸ್ಥಳಗಳಿಗೆ ಭೇಟಿ ನೀಡಿತ್ತು?

ಇ) ಆ ಆಯೋಗದ ಮುಂದೆ ರಾಜ್ಯ ಸರ್ಕಾರವು ಸಲ್ಲಿಸಿರುವ ಮನವಿಯ ಮುಖ್ಯ ಸಾರಾಂಶವೇನು?

ಈ) ಕೇಂದ್ರ ಸರ್ಕಾರವು ಆದಾಯ ತೆರಿಗೆ ಮಿತಿಯನ್ನು ಏರಿಸಿರುವುದರಿಂದ ಹಾಗೂ ರಾಜ್ಯ ಸರ್ಕಾರಿ ನೌಕರರುಗಳಿಗೆ ಆಗಿಂದಾಗ್ಗೆ ತುಟ್ಟಿಭತ್ಯೆ ನೀಡಬೇಕಾಗಿರುವುದರಿಂದ ಉಂಟಾಗಿರುವ ಹಣಕಾಸಿನ ತೊಂದರೆಯನ್ನು ಆ ಆಯೋಗದ ಗಮನಕ್ಕೆ ತರಲಾಗಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) 1994ರ ಮಾರ್ಚ್ 8 ಮತ್ತು 9ರಂದು.

ಆ) ಬೆಂಗಳೂರು.

ಇ) ಅನುಬಂಧ 1 ರಲ್ಲಿ ನೀಡಲಾಗಿದೆ.

ಈ) ಆದಾಯ ತೆರಿಗೆ ಮಿತಿಯನ್ನು ಏರಿಸಿರುವುದರಿಂದ ಆದಾಯ ತೆರಿಗೆಯಲ್ಲಿನ ರಾಜ್ಯದ ಪಾಲಿನಲ್ಲಿ ಕಡಿತವಾಗುತ್ತದೆ. ಆದರೆ ಒಟ್ಟಾರೆ ತೆರಿಗೆ ಆದಾಯದ ವೃದ್ಧಿ, ತೆರಿಗೆ ಸಂಗ್ರಹಣೆಯಲ್ಲಿ ಸುಧಾರಣೆ ಮತ್ತು ತೆರಿಗೆದಾರರಿಂದ ತೆರಿಗೆ ಕಾನೂನುಗಳ ಪಾಲನೆ ಈ ಅಂಶಗಳು ಆಗಬಹುದಾಗಿದ್ದ ಕಡಿತವನ್ನು ನಿವಾರಿಸುತ್ತವೆ. ಹಾಗಾಗಿ ರಾಜ್ಯಕ್ಕೆ ನಷ್ಟ ಉಂಟಾಗುವ ಸಂಭವವಿಲ್ಲ. ಈ ಕಾರಣದಿಂದಾಗಿ ಈ ವಿಷಯದ ಬಗ್ಗೆ ಆಯೋಗಕ್ಕೆ ಮನವಿಯನ್ನು ಸಲ್ಲಿಸಿಲ್ಲ. ನೌಕರರಿಗೆ ನೀಡುವ ತುಟ್ಟಿ ಭತ್ಯೆಯನ್ನು ಕುರಿತು ಆಯೋಗದ ಗಮನ ಸೆಳೆಯಲಾಗಿದೆ.

ಅನುಬಂಧ-1

ಹತ್ತನೇ ಆರ್ಥಿಕ ಆಯೋಗಕ್ಕೆ ರಾಜ್ಯಸರ್ಕಾರವು ಸಲ್ಲಿಸಿದ ಮನವಿಯ ಮುಖ್ಯಾಂಶಗಳು

ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ರಾಜ್ಯ ಸರ್ಕಾರಗಳಿಗೆ ದೊಡ್ಡ ಪ್ರಮಾಣದಲ್ಲಿ ಸಂಪನ್ಮೂಲದ ಅಗತ್ಯ ಇರುವುದರಿಂದ ಕೋಶೀಯ ಕೊರತೆ (ಫಿಸ್ಕಲ್ ಡೆಫಿಸಿಟ್)ಯನ್ನು ಕಡಿಮೆ ಮಾಡುವ ನೆಪದಲ್ಲಿ ರಾಜ್ಯ ಸರ್ಕಾರಗಳಿಗೆ ನೀಡುವ ಹಣವನ್ನು ಕಡಿತಗೊಳಿಸಬಾರದು.

ಆದಾಯ ತೆರಿಗೆ ಮತ್ತು ನಿಗಮ ತೆರಿಗೆಗಳನ್ನು ಒಟ್ಟುಗೂಡಿಸಿ ಒಟ್ಟು ಮೊತ್ತದ ಶೇಕಡಾ 50 ರಷ್ಟು ಅಥವಾ ಆದಾಯ ತೆರಿಗೆಯಿಂದ ಬರುವ ನಿವ್ವಳ ಆದಾಯದ ಶೇಕಡಾ 85ರಷ್ಟು ಮತ್ತು ನಿಗಮ ತೆರಿಗೆಯಿಂದ ಬರುವ ನಿವ್ವಳ ಆದಾಯದ ಶೇಕಡಾ 15ರಷ್ಟನ್ನು ರಾಜ್ಯಗಳಿಗೆ ಹಂಚಬೇಕು. ದಂಡ, ಬಡ್ಡಿ ಮತ್ತು ಮಾರಾಟಗಳಿಂದ ಬರುವ ಆದಾಯವನ್ನು ರಾಜ್ಯಗಳಿಗೆ ಹಂಚಿಕೆ ಮಾಡುವ ಆದಾಯ ತೆರಿಗೆಯಲ್ಲಿ ಸೇರಿಸಬೇಕು. ಆದಾಯ ತೆರಿಗೆಯನ್ನು ರಾಜ್ಯಗಳಿಗೆ ಹಂಚಿಕೆ ಮಾಡುವಾಗ ಅನುಸರಿಸುವ ಸೂತ್ರಗಳಲ್ಲಿ ರಾಜ್ಯಗಳ ತೆರಿಗೆ ಸಂಗ್ರಹಣೆ ಪ್ರಯತ್ನ ಹಾಗೂ ರಾಜ್ಯದಲ್ಲಿ ಸಂಗ್ರಹವಾಗುವ ಆದಾಯ ತೆರಿಗೆ ಪ್ರಮಾಣ ಈ ಅಂಶಗಳಿಗೆ ಹೆಚ್ಚಿನ ಒತ್ತು ನೀಡಬೇಕು.

ಒಕ್ಕೂಟದ ಮೂಲ ಉತ್ಪಾದನಾ ಶುಲ್ಕದ ನಿವ್ವಳ ಆದಾಯ ಶೇಕಡಾ 50 ರಷ್ಟನ್ನು ರಾಜ್ಯಗಳಿಗೆ ಹಂಚಿಕೆ ಮಾಡಬೇಕು. ವೆಚ್ಚ ತೆರಿಗೆಯಿಂದ ಬರುವ ಆದಾಯ ಮತ್ತು ಅಡ್ವಿನಿಸ್ಟರ್ಡ್ ಬೆಲೆಗಳ ಹೆಚ್ಚಳದಿಂದ ಬರುವ ಆದಾಯ ಇವುಗಳನ್ನು ರಾಜ್ಯಕ್ಕೆ ಹಂಚಿಕೆ ಮಾಡುವ ಒಕ್ಕೂಟದ ಮೂಲ ಉತ್ಪಾದನಾ ಶುಲ್ಕದೊಂದಿಗೆ ಸೇರಿಸಬೇಕು.

ಒಕ್ಕೂಟದ ಮೂಲ ಉತ್ಪಾದನಾ ಶುಲ್ಕವನ್ನು ರಾಜ್ಯಗಳಿಗೆ ಹಂಚಿಕೆ ಮಾಡಲು ಅನುಸರಿಸುವ ಸೂತ್ರದಲ್ಲಿ ರಾಜ್ಯಗಳ ತೆರಿಗೆ ಸಂಗ್ರಹಣೆ ಪ್ರಯತ್ನ ಮತ್ತು ರಾಜ್ಯದಲ್ಲಿನ ಜನಸಂಖ್ಯೆ ಈ ವಿಷಯಗಳಿಗೆ ಹೆಚ್ಚಿನ ಒತ್ತು ಕೊಡಬೇಕು.

ಪ್ರತಿ ರಾಜ್ಯದ ಮಾರಾಟ ತೆರಿಗೆಯ ಆದಾಯ 1990-91 ರಿಂದ 1993-94ರ ಅವಧಿಯಲ್ಲಿ ಎಲ್ಲ ರಾಜ್ಯಗಳ ಒಟ್ಟು ಮಾರಾಟ ತೆರಿಗೆಯ ಆದಾಯಕ್ಕೆ ಯಾವ ಪ್ರಮಾಣಾನುಪಾತವನ್ನು ಹೊಂದಿದೆಯೋ ಅದೇ ಪ್ರಮಾಣಾನುಪಾತದಲ್ಲಿ ಮಾರಾಟ ತೆರಿಗೆಯ ಬದಲು ನೀಡಲಾಗುತ್ತಿರುವ ಅಧಿಕ ಉತ್ಪಾದನಾ ಶುಲ್ಕವನ್ನು ರಾಜ್ಯಗಳಿಗೆ ನೀಡಬೇಕು. ಸಂವಿಧಾನದ 269ನೇ ಅನುಚ್ಛೇದದಲ್ಲಿ ನಮೂದಿಸಲಾಗಿರುವ ಎಲ್ಲ ತೆರಿಗೆಗಳನ್ನು ರಾಜ್ಯಸರ್ಕಾರಗಳ ಅನುಕೂಲಕ್ಕಾಗಿ ಕೇಂದ್ರ ಸರ್ಕಾರವು ವಿಧಿಸಬೇಕು. ರೈಲ್ವೆ ಪ್ರಯಾಣ ದರದ ಬದಲಾಗಿ ನೀಡುತ್ತಿರುವ ಅನುದಾನವನ್ನು ಕಳೆದ 3 ವರ್ಷಗಳಲ್ಲಿ ನಾನ್ ಸಬರ್ಬನ್ ಪ್ರಯಾಣ ದರದಿಂದ ಬಂದ ಸರಾಸರಿ ಆದಾಯದ ಶೇಕಡಾ 12ಕ್ಕೆ ಸಮನಾಗಿ ನಿಗದಿ ಮಾಡಬೇಕು. ಇಲ್ಲದಿದ್ದಲ್ಲಿ ರೈಲ್ವೆ ಪ್ರಯಾಣ ದರದ ಮೇಲಿನ ತೆರಿಗೆಯನ್ನು ಪುನಃ ವಿಧಿಸಬೇಕು.

ಬರಗಾಲ ಪರಿಹಾರಕ್ಕಾಗಿ ಪ್ರಕೃತಿ ವಿಕೋಪ ಪರಿಹಾರ ವಿಧಿಗೆ ಕೇಂದ್ರ ಸರ್ಕಾರವು ನೀಡುವ ವಾರ್ಷಿಕ ವಂತಿಕೆಯನ್ನು ಸುಮಾರು 80 ಕೋಟಿ ರೂ.ಗಳಿಗೆ 1995-96ರಿಂದ ಜಾರಿಗೆ ಬರುವಂತೆ ಹೆಚ್ಚಿಸಬೇಕು. ಅಲ್ಲದೆ ಆಯೋಗದ ಶಿಫಾರಸ್ಸಿನ ಅವಧಿಯಲ್ಲಿ (1995-2000) ಈ ವಂತಿಕೆಯು ಪ್ರತಿ ವರ್ಷ ಶೇಕಡಾ 10 ರಷ್ಟು ಹೆಚ್ಚಾಗುವಂತೆ ಸೂಕ್ತ ಬದಲಾವಣೆ ಮಾಡಬೇಕು. ಪ್ರವಾಹಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಅಧಿಕಾರಿಗಳ ತಂಡ ಸ್ಥಳ ತನಿಖೆ ಮಾಡಿ ತಯಾರಿಸುವ ಅಂದಾಜಿನ ಆಧಾರದ ಮೇಲೆ ಅನುದಾನ ನೀಡುವ ಹಿಂದಿದ್ದ ವ್ಯವಸ್ಥೆಯನ್ನು ಪುನಃ ಜಾರಿಗೆ ತರಬೇಕು.

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ನೀಡಿರುವ ಸಾಲಗಳನ್ನು ಒಟ್ಟುಗೂಡಿಸಿ ಅವುಗಳ ಮರು ಪಾವತಿಯನ್ನು ರೀಶ್ಯೂಲ್ ಮಾಡಬೇಕು. ಸಣ್ಣ ಉಳಿತಾಯ ಸಂಗ್ರಹಣೆಯ ಬಾಬ್ತು ರಾಜ್ಯ ಸರ್ಕಾರಗಳಿಗೆ ನೀಡುತ್ತಿರುವ ಸಾಲದ ಪ್ರಮಾಣವನ್ನು ನಿವ್ವಳ ಸಂಗ್ರಹಣೆಯ ಶೇಕಡಾ 90ಕ್ಕೆ ಏರಿಸಬೇಕು ಮತ್ತು ಈ ಸಾಲಗಳನ್ನು ನಿರಂತರ ಸಾಲಗಳೆಂದು ಪರಿಗಣಿಸಬೇಕು. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳನ್ನು ಅನುಷ್ಠಾನಗೊಳಿಸಲು 1995-2000 ಅವಧಿಗೆ ರಾಜ್ಯಕ್ಕೆ ಬೇಕಾಗುವ 610 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರವು ಒದಗಿಸಬೇಕು.

ಫೈನಾನ್ಸ್ ಬಿಲ್ 1994ರ ಪ್ರಕಾರ ಟೆಲಿಫೋನ್ ಬಿಲ್ಲಗಳು, ವಿಮಾ ಪ್ರೀಮಿಯಂ ಮತ್ತು ಶೇರು ದಳ್ಳಾಳಿಗಳು ಪಡೆಯುವ ದಳ್ಳಾಳಿ ಶುಲ್ಕ ಇವುಗಳ ಮೇಲೆ ವಿಧಿಸಲಾಗಿರುವ ಸೇವಾ ತೆರಿಗೆಯಿಂದ ಬರುವ ಆದಾಯವನ್ನು ಎಲ್ಲ ರಾಜ್ಯಗಳಿಗೆ ಹಂಚಿಕೆ ಮಾಡಬೇಕು.

ಜಿಲ್ಲಾ ಮಟ್ಟದಲ್ಲಿ ಪೋಲೀಸ್ ಸಂಪರ್ಕ ಸಭೆಗಳನ್ನು ನಡೆಸುವುದು

525 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಪೋಲೀಸ್ ಆಯುಕ್ತರು ಬೆಂಗಳೂರಿನಲ್ಲಿ ಇತ್ತೀಚೆಗೆ ಪೋಲೀಸ್ ಸಂಪರ್ಕ ಸಭೆಗಳನ್ನು ನಡೆಸುತ್ತಿರುವುದು ನಿಜವೇ;

ಆ) ಆ ಪೋಲೀಸ್ ಸಂಪರ್ಕ ಸಭೆಗಳು ಯಶಸ್ವಿಯಾಗಿ ನಡೆಯುತ್ತಿದ್ದು, ಅಂತಹ ಸಭೆಗಳಿಂದಾಗಿ ನಾಗರೀಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡು ಪರಿಹಾರಗಳನ್ನು ಕಂಡುಕೊಳ್ಳುತ್ತಿರುವುದರಿಂದ, ಅದೇ ರೀತಿಯ ಸಭೆಗಳನ್ನು ಜಿಲ್ಲಾಮಟ್ಟದಲ್ಲಿ ಕನಿಷ್ಠ ತಿಂಗಳಿಗೊಂದು ಬಾರಿಯಾದರೂ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ನಡೆಸುವ ವ್ಯವಸ್ಥೆಯನ್ನು ಮಾಡಲಾಗುವುದೇ?